Allotment of Industrial sheds

635. Sri H. M. Revanna (Magadi).—Will the Deputy Minister for Small Scale Industries be Pleased to State ?

a) Has the non-allotment of Industrial Sheds constructed in Magadi Town come to the notice of Government ?

b) If so, will suitable action be taken to allot these Sheds ?

Smt Suma Vasanth (Deputy Minister for Small Scale Industries).—

a) Yes.

b) Necessary action is being taken.

ಬೆಲೆ ಸ್ಥಿರೀಕರಣ ನಿಧಿಯ ಬಗ್ಗೆ

೫೯೦. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಲೆ ಸ್ಥಿರೀಕರಣ ನಿಧಿಯಲ್ಲಿ ಇದುವರೆವಿಗೆ ಎಷ್ಟು ಹಣ ಸಂಗ್ರಹವಾಗಿದೆ.

ಆ) ಇದನ್ನು ಯಾವ ಯಾವ ಬಾಬುಗಳಿಗೆ ಉಪಯೋಗಿಸಲು ಅವಕಾಶವಿದೆ.

ಇ) ಮೇಲ್ಕಂಡ ನಿಧಿಯಿಂದ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮಕ್ಕಾಗಿ ಹಣ ಉಪಯೋಗಿಸಿರುವುದರಿಂದ ಕಾನೂನು ಉಲ್ಲಂಘನೆ ಮಾಡಿದಂತಾಗಿಲ್ಲವೆ.

ಈ) ಉಲ್ಲಂಘನೆ ಮಾಡಿರುವವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

ಅ) ಡಿಸೆಂಬರ್ ೧೯೭೯ ರಿಂದ ಏಪ್ರಿಲ್ ೧೯೮೧ ರ ಅಂತ್ಯದ ವರೆಗೆ ಬೆಲೆ ಸ್ಥಿರೀಕರಣ ನಿಧಿಯಲ್ಲಿ ಸುಮಾರು ರೂ. ೫೨.೨೦ ಕೋಟಿ ದೂಪಾಯಿಗಳಷ್ಟು ಸಂಗ್ರಹವಾಗಿದೆ.

ಆ) ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ) ಕಾಯಿದೆ ೧೯೫೯ರ ಪ್ರಕಾರ ರೇಷ್ಮೆ ಗೂಡು ಹಾಗೂ ರೇಷ್ಮೆ ನೂಲಿನ ಬೆಲೆ ಸ್ಥಿರೀಕರಿಸಲು, ರೇಷ್ಮೆ ಬಿತ್ತನೆ ಗೂಡು, ನೂಲು ಬಿಚ್ಚಾಣಿಕೆ, ಹುರಿ ಮಾಡುವ ಕಾರ್ಯ ಕ್ರಮಗಳನ್ನು ಅಭಿವೃದ್ಧಿ ಪಡಿಸಲಂ ಮತ್ತು

೨. ರೇಷ್ಮೆ ಗೂಡಿನ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯಂ ಕೇಂದ್ರಗಳ ಕಟ್ಟಡ ನಿರ್ಮಾಣ ಕ್ಕಾಗಿ.

೩. ರೇಷ್ಮೆ ಗೂಡಿನ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಅಗತ್ಯ ಸೌಲಭ್ಯ ಗಳನ್ನು ಒದಗಿಸಲು

೪. ರೇಷ್ಮೆ ನೂಲಿನ ನಿಧಿ ಪ್ರಾಧಿಕಾರದಿಂದ ಆಗಿಂದಾಗ್ಗೆ ತಳಬೆಲೆ ನಿಗಧಿಪಡಿಸಲು ಮತ್ತು

೫. ರೇಷ್ಮೆ ಬಿತ್ತನೆ ಗೂಡು ರೇಷ್ಮೆ ನೂಲನ್ನು ಪರೀಕ್ಷಿಸಲು ಮತ್ತು ಪರ್ಗೀಕರಿಸಲಂ ಉಪಯೋಗಿಸಬಹುದಾಗಿದೆ.

ಈ ಮೇಲಿನ ವಿಷಯಗಳಿಗೆ ಹೊರತಾದ ಕಾರ್ಯಕ್ರಮಗಳಲ್ಲದೆ ಬೇರೆ ಬಾಬುಗಳಿಗೆ ಈ ನಿಧಿಯಿಂದ ಹಣವನ್ನು ವೆಚ್ಚ ಮಾಡಬಾರದು.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.